# ವಲಸೆ ಕಾರಣ

ನಮ್ಮ ನಾಡಿನ ಮಾಗಿ ಕಾಲದ ಹೊಲಗದ್ದೆಗಳಲ್ಲಿ ದವಸ ಧಾನ್ಯಗಳು ಫಲಭರಿತು ತೊನೆಯುತ್ತಿರುತ್ತವೆ. ಸುಗ್ಗಿಯ ನಿರೀಕ್ಷೆಯಲ್ಲಿ ರೈತಾಪಿಜನ ನಡೆದಾಡುತ್ತಿದ್ದರೆ ಅವರ ಕಣ್ಣಿಗೆ ವರ್ಷವೆಲ್ಲಾ ತಾವು ನೋಡಿರದ ನವನಮೂನೆಯ ಪಕ್ಷಿಗಳು ಕಣ್ಣಿಗೆ ಬೀಳುತ್ತವೆ. ರೈತರು ಅವನ್ನು ನೋಡಿ ಆನಂದ ಪಡುತ್ತಾರೆ; ತಮ್ಮ ಮಕ್ಕಳಿಗೆ ಅವನ್ನು ತೋರಿ ಖುಷಿಪಡಿಸುತ್ತಾರೆ. ತಾವು ಬೆಳೆದ ಬೆಳೆ 'ತಮಗೂ ಇತರರಿಗೂ' ಎಂಬ ತತ್ವದಲ್ಲಿ ಅವರು ಬೆಳೆದಿರುತ್ತಾರೆ.

ಅವರಿಗೆ ಅವು ಸಾವಿರಾರು ಮೈಲುಗಳಿಂದ ಪ್ರಯಾಣ ಮಾಡಿ ಬಂದಿರುವ ವಲಸೆ ಹಕ್ಕಿಗಳೆಂದು ತಿಳಿದಿರುವುದಿಲ್ಲ. ದೂರದ ಸೈಬೀರಿಯಾದಿಂದ, ಅಲ್ಲಿನ ಚಳಿಯನ್ನು ತಾಳಲಾರದೆ, ಅತಿ ಎತ್ತರವಾದ ಹಿಮಾಲಯ ಪರ್ವತ ಶ್ರೇಣಿಯನ್ನು ದಾಟಿ, ಹಿತವಾದ ಬೆಚ್ಚನೆಯ ಹವಾಮಾನವಿರುವ ನಮ್ಮ ಹೊಲಗದ್ದೆ ಕೆರೆ ಕಟ್ಟೆಗಳಲ್ಲಿ ಅವು ತಂಗುತ್ತವೆ. ಇಲ್ಲಿನ ಆಹಾರ ತಿಂದು ನೀರು ಕುಡಿದು, ಮರಗಿಡ ಪೊದೆಗಳಲ್ಲಿ ಗೂಡುಕಟ್ಟಿ, ಮೊಟ್ಟೆ ಇಟ್ಟು ಮರಿ ಮಾಡಿ, ಮರಿಗಳನ್ನು ದೊಡ್ಡದು ಮಾಡಿಕೊಂಡು ವಸಂತ ಕಾಲದ ಆಗಮನವಾಗುತ್ತಿದ್ದಂತೆ ಸಂಸಾರ ಸಮೇತ ಮತ್ತೆ ತಮ್ಮ ಮೂಲನೆಲೆಗೆ ಪ್ರಯಾಣ ಬೆಳೆಸುತ್ತವೆ. ಅದೇ ರೀತಿ ಕೇವಲ ತಮ್ಮ ಸಂತಾನಾಭಿವೃದ್ಧಿಗಾಗಿಯೇ ಸಾವಿರಾರು ಮೈಲುಗಳ ಖಂಡಾಂತರ ಸಾಗರಗಳನ್ನು ಈಜಿ ಭೂಮಿಯ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಯಾನ ಮಾಡುವ ಮೀನುಗಳಿವೆ. ಈ ಅಸಾಮಾನ್ಯಯಾನದಲ್ಲಿ ಯಾನ ಪ್ರಾರಂಭಿಸಿದ ಮೀನಿನ ಮಗನೋ ಮೊಮ್ಮಗನೋ ಮತ್ತೆ ಮೂಲ ನೆಲೆಗೆ ವಾಪಸು ಬರುತ್ತದೆಯೆಂಬ ಸತ್ಯ ವಲಸೆಯ ಮಹತ್ವ ಮತ್ತು ಅನಿವಾರ್ಯತೆಯನ್ನು ಸೂಚಿಸುತ್ತದೆ.

ಪುರಾತನ ಕಾಲದಿಂದಲೂ ಮನುಷ್ಯ ಸೂಕ್ತ ಹವಾಮಾನ, ಆಹಾರ ಮತ್ತು ನೀರಿನ ಲಭ್ಯತೆಯನ್ನು ಹುಡುಕಿಕೊಂಡು ಒಂದು ಕಡೆಯಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾ ಬಂದಿದ್ದಾನೆ. ಹಾಗೆ ನೋಡಿದರೆ ಇಂದು ಜಗತ್ತಿನಲ್ಲಿ ವಾಸಿಸುತ್ತಿರುವ ಜನರೆಲ್ಲರೂ 'ಪರದೇಶ'ಗಳಿಂದ ವಲಸೆ ಬಂದವರೆ! ಜಿಲ್ಲೆಯಿಂದ ಜಿಲ್ಲೆಗೆ, ರಾಜ್ಯದಿಂದ ರಾಜ್ಯಕ್ಕೆ, ದೇಶದಿಂದ ದೇಶಕ್ಕೆ ನಿರಂತರವಾಗಿ ನೆಮ್ಮದಿಯನ್ನು ಹುಡುಕಿ ಅಲೆದಾಡಿ, ಯಾವುದೋ ಒಂದು ಜಾಗದಲ್ಲಿ ಸಮಾಧಾನಕರ ಪರಿಸರ ಕಂಡು ನೆಲೆಯೂರಿ, ಅದನ್ನೇ ತನ್ನದೆಂದು ಪ್ರೀತಿಸಿ ಮನುಷ್ಯ ಬಾಳ್ವೆ ಮಾಡಿದ್ದಾನೆ. ಈ ಪ್ರೀತಿ ತಾನು ನಿಂತ ನೆಲಕ್ಕೆ ತೋರುವ ಕೃತಜ್ಞತೆಯ ರೂಪ.

ಇಂದು ಭಾರತದಲ್ಲಿ ಉದ್ಯೋಗ ಮತ್ತು ಸುಲಭವಾಗಿ ದೊರಕುವ ಕೂಲಿಯ ಕಾರಣಕ್ಕಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಜನ ವಲಸೆ ಹೋಗುತ್ತಿದ್ದಾರೆ. ಬಿಹಾರದಿಂದ ತಮ್ಮ ಹೆಂಡತಿ ಮಕ್ಕಳೊಡನೆ ವಲಸೆ ಬಂದು ಪಂಜಾಬಿನ ಗದ್ದೆಗಳಲ್ಲಿ ಕೆಲಸ ಮಾಡುವ ಸಾವಿರಾರು ಶ್ರಮಿಕರು; ಉತ್ತರ ಕರ್ನಾಟಕದಿಂದ ವಲಸೆಹೋಗಿ ಗೋವಾದ ಹೊಲಗದ್ದೆಗಳಲ್ಲಿ ಮತ್ತು ಮೀನುಉದ್ಯಮದಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರು ಗಮನಕ್ಕೆ ಬರುತ್ತಾರೆ. ಇವರನ್ನು ನಾವು ಶಾಶ್ವತವಾಗಿ ವಲಸೆ ಹೋದವರೆಂದು ಗುರುತಿಸಲಾಗದು. ತಮ್ಮ ಮೂಲನೆಲೆಯಲ್ಲಿ ಬದುಕು ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ತಮ್ಮ ಸಂಸಾರವನ್ನು ಉಳಿಸಿಕೊಳ್ಳಲು ವಲಸೆ ಹೋಗುತ್ತಾರೆ. ತಮ್ಮ ನೆಲೆಯ ಸ್ಥಿತಿ ಉತ್ತಮಗೊಂಡಾಗ ಮತ್ತೆ ವಾಪಸ್ಸಾಗುತ್ತಾರೆ.

ಇಂದು ಜಗತ್ತಿನ ಹಲವು ಭಾಗಗಳಲ್ಲಿ ರಾಜಕೀಯ ವಿಪ್ಲವದ ಕಾರಣದಿಂದಾಗಿ ವಲಸೆ ಹೋಗುವ ಪ್ರಕ್ರಿಯೆ ಅಧಿಕವಾಗುತ್ತಿದೆ. ಕಳೆದ ಒಂದೆರಡು ವರ್ಷಗಳಲ್ಲಿ ಸಿರಿಯಾ ದೇಶದಿಂದ ಅಕ್ಕಪಕ್ಕದ ಅರಬ್ ಹಾಗೂ ಯೂರೋಪಿನ ಮೆಡಿಟರೇನಿಯನ್ ಕಡಲಭಾಗದ ದೇಶಗಳಿಗೆ ವಲಸೆ ಹೋದವರು ಲಕ್ಷಾಂತರ ಮಂದಿ. ಒಂದು ದೇಶದ ಆಡಳಿತವು ಸರ್ವಾಧಿಕಾರದ ಕೈಗೆ ಸಿಕ್ಕಿ, ಅಧಿಕಾರದ ಕ್ರೌರ್ಯದ ಹೊಡೆತಕ್ಕೆ ಬದುಕಲಾರದಂಥ ಅಸಹನೀಯ ಸ್ಥಿತಿ ನಿರ್ಮಾಣವಾಗುತ್ತದೆ. ಕೇವಲ ವ್ಯಕ್ತಿಸ್ವಾತಂತ್ರ್ಯ ಮಾತ್ರ ಹರಣವಾಗದೇ ತಿನ್ನಲು ಅನ್ನ ಸಿಗದಂಥ, ಮಲಗಲು ವಸತಿ ಇಲ್ಲದಂಥ ವಾತಾವರಣ ಸೃಷ್ಟಿಯಾಗುತ್ತದೆ. ಅದಕ್ಕಿಂತ, ಮಿಗಿಲಾದ ಪ್ರಾಣಭಯ! ಮನುಷ್ಯನಿಗೆ ತನ್ನ ಸಂತತಿ ಉಳಿಸಿಕೊಳ್ಳುವ ಬಯಕೆ. ತನ್ನ ಮಕ್ಕಳ ಜೀವರಕ್ಷಣೆಗೆ ಅಪಾಯದ ಎಲ್ಲ ಗೆರೆಗಳನ್ನು ದಾಟಿ, ಪಡಬಾರದ ನೋವನ್ನು ಅನುಭವಿಸಿ, ಸಾವಿರಾರು ಮೈಲಿ ಮರಳುಗಾಡನ್ನೋ ಸಾಗರವನ್ನೋ ಹಿಂದಕ್ಕಿಕ್ಕಿ ನೆಮ್ಮದಿಯ ನೆಲೆಯನ್ನು ಹುಡುಕಹೊರಡುತ್ತಾನೆ. ಒಂದು ಶಾಂತ ನೆಲೆ ಸಿಕ್ಕಾಗ ಹೊಸ ನೆಲೆಯ ಅನುಕಂಪದಲ್ಲಿ ಅನೇಕ ಸಂದರ್ಭದಲ್ಲಿ ಎರಡನೆಯ ದರ್ಜೆ ಪ್ರಜೆಯಾಗಿ ಬದುಕು ಸಾಗಿಸುತ್ತಾನೆ; ಹೊಸ ಪರಿಸರದಲ್ಲಿ ತನ್ನ ನೆಲೆಯನ್ನು ಕಂಡುಕೊಳ್ಳುತ್ತಾನೆ.

ಕಳೆದ ವರ್ಷ ಮಯನ್ಮಾರಿನ (ಬರ್ಮಾ) ಸಾವಿರಾರು ರೊಹಿಂಗ್ಯಾ ಮುಸ್ಲಿಂ ವಲಸೆಗಾರರು ಭಾರತಕ್ಕೆ ಬಂದರು. ಇದು ರಾಜಕೀಯ ಕ್ರೌರ್ಯವನ್ನು ಮೀರಿದ ಧಾರ್ಮಿಕ ಕ್ರೌರ್ಯದಿಂದ ಉಂಟಾದ ಮಾನವತೆಯ ಮೇಲಿನ ದೌರ್ಜನ್ಯ. ಜಗತ್ತಿಗೆ ಸಮಾನತೆ ಮತ್ತು ಶಾಂತಿ ತತ್ವವನ್ನು ಬೋಧಿಸಿದ ಬುದ್ಧನ ಅನುಯಾಯಿಗಳಿಂದಾದುದು ವಿಪರ್ಯಾಸ.

ವಲಸೆ ಬಂದವರು ಹೋದ ನಾಡಿನಲ್ಲಿ ತಮ್ಮ ಕಾಲೋನಿಗಳನ್ನು ನಿರ್ಮಿಸಬಾರದು. ತಮ್ಮತನವನ್ನುಳಿಸಿಕೊಂಡು, ಹೋದ ನೆಲದ ಸಂಸ್ಕೃತಿ ತತ್ವವನ್ನು ತನ್ನದೆಂಬಂತೆ ಪ್ರೀತಿಸಬೇಕು. ಅದು ಸಹಬಾಳ್ವೆಯೂ ಹೌದು, ಆಶ್ರಯ ನೀಡಿದ ನೆಲಕ್ಕೆ ನೀಡುವ ಕೃತಜ್ಞತಾಪೂರ್ವ ಗೌರವವೂ ಹೌದು.

■ **ಶಿಕಾಕು**

## ಮಾತೇ ಮುತ್ತು

★ ಹತ್ತು ಸಾವಿರ ಸಂಬಂಧಿಕರಿಗಿಂತ ಒಬ್ಬ ನಿಷ್ಠಾವಂತ ಗೆಳೆಯ ಮೇಲು.
-ಯೂರಿಪಿಡೀಸ್

★ ನೈಜ ಗೆಳೆಯರು ನಿಮ್ಮನ್ನು ಎದುರಿನಿಂದ ಇರಿಯುತ್ತಾರೆ.
-ಆಸ್ಕರ್ ವೈಲ್ಡ್

★ ಮನುಷ್ಯನಾಗುವುದು ಸುಲಭ. ಮಾನವೀಯವಾಗಿರುವುದು ಕಷ್ಟ.
-ಮಿರ್ಜಾ ಘಾಲಿಬ್

★ ವೇದಾಂತಿ ಹೇಳಿದನು ಹೊನ್ನೆಲ್ಲ ಮಣ್ಣು ಮಣ್ಣು
ಕವಿಯೊಬ್ಬ ಹೇಳಿದನು ಮಣ್ಣೆಲ್ಲ ಹೊನ್ನು ಹೊನ್ನು
-ಜಿ.ಎಸ್.ಶಿವರುದ್ರಪ್ಪ

★ ನಿಧಾನಕ್ಕೆ ಗೆಳೆತನ ಮಾಡಿಕೋ. ಆದರೆ ಒಮ್ಮೆ ಗೆಳೆತನವಾದ ಬಳಿಕ ಸ್ಥಿರವಾಗಿರು.
-ಸಾಕ್ರೆಟಿಸ್

★ ಎಲ್ಲರಿಗೂ ಗೆಳೆಯನಾಗಿರುವುದೆಂದರೆ ಯಾರಿಗೂ ಗೆಳೆಯನಾಗಿಲ್ಲದಿರುವುದು.
-ಅರಿಸ್ಟಾಟಲ್

★ ಗೆಳೆತನವೆಂದರೆ ಹಣವಿದ್ದ ಹಾಗೆ. ಇಟ್ಟುಕೊಳ್ಳುದಕ್ಕಿಂತ ಖರ್ಚು ಮಾಡುವುದು ಸುಲಭ.
-ಸ್ಯಾಮುವೆಲ್ ಬಟ್ಲರ್

★ ಗೆಳೆಯನನ್ನು ಆಯ್ಕೆ ಮಾಡುವಾಗ ನಿಧಾನಿಸು; ಬದಲಾಯಿಸುವಾಗ ಇನ್ನಷ್ಟು ನಿಧಾನಿಸು.
-ಬೆಂಜಮಿನ್ ಫ್ರಾಂಕ್ಲಿನ್

★ ಜಗತ್ತಿನಲ್ಲಿ ಸಾವಿರಾರು ಸುಳ್ಳುಗಳು ಸುತ್ತು ಹೊಡೆಯುತ್ತಿವೆ. ದುರಂತವೆಂದರೆ ಅವುಗಳಲ್ಲಿ ಅರ್ಧದಷ್ಟು ಸತ್ಯವಾಗಿವೆ.
–ವಿನ್‌ಸ್ಟನ್ ಚರ್ಚಿಲ್

★ ಉತ್ತಮ ಶಿಕ್ಷಕ ಭರವಸೆಯನ್ನು ಹುಟ್ಟಿಸಿ, ಕಲ್ಪನಾಶಕ್ತಿಯನ್ನು ಉದ್ದೀಪಿಸಿ ಕಲಿಕೆಯಲ್ಲಿ ಪ್ರೀತಿ ಮೂಡಿಸುತ್ತಾನೆ.
–ಬ್ರಾಡ್ ಹೆನ್ರಿ

★ ಕಣ್ಣಿಗೆ ಕಾಣಿಸದ್ದು ಎಷ್ಟೋ ಸಲ ಹೃದಯಕ್ಕೆ ಕಾಣಿಸುತ್ತದೆ.
–ಜಾಕ್ಸನ್ ಬ್ರೌನ್ ಜೂ.

★ ನೀವು ಯಾವುದನ್ನು ಪ್ರೀತಿಸುತ್ತೀರೋ ಅದರ ಸೌಂದರ್ಯ ನಿಮ್ಮ ಕೆಲಸದಲ್ಲಿ ಪ್ರತಿಫಲಿಸಲಿ.
–ರೂಮಿ